ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**
**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

No.RDP/SWSM/NBA/IAY-27/2013-14 /403 ದಿನಾಂಕ :14.11.2013

**ರವರಿಗೆ,**
ವ್ಯವಸ್ಥಾಪಕ ನಿರ್ದೇಶಕರು,
ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ,
ರಾಜಾಜಿನಗರ, ಬೆಂಗಳೂರು.
ಮಾನ್ಯರೆ,

*ವಿಷಯ:* ಬಸವ ಯೋಜನೆಯಡಿ ನಿರ್ಮಿಸಿಕೊಂಡ ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಪ್ರೋತ್ಸಾಹಧನ ನೀಡುವ ಕುರಿತು.

*ಉಲ್ಲೇಖ* ಕೇಂದ್ರ ಸರ್ಕಾರದ ಪತ್ರಸಂಖ್ಯೆ: No.W.11042/38/2012-CRSP ದಿನಾಂಕ 16.05.2013

- - -

ಕೇಂದ್ರ ಸರ್ಕಾರದ ಉಲ್ಲೇಖ ಪತ್ರದನ್ವಯ ಗ್ರಾಮೀಣ ಪ್ರದೇಶದಲ್ಲಿ IAY ಯೋಜನೆಯಡಿ ಮನೆಗಳನ್ನು ನಿರ್ಮಿಸಕೊಂಡ ಫಲಾನುಭವಿಗಳಿಗೆ, IAY Implimenting Agency ಮೂಲಕ ಶೌಚಾಲಯವನ್ನು ನಿರ್ಮಿಸಿ, NBA ಯೋಜನೆಯಡಿ ಪ್ರೋತ್ಸಾಹಧನ ಪಡೆಯಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಬಸವ ಹಾಗೂ ರಾಜ್ಯದ ಇತರೆ ಗ್ರಾಮೀಣ ವಸತಿ ಯೋಜನೆಗೂ ಈ ಸೌಲಭ್ಯ ಕಲ್ಪಿಸಲು ಯೋಜನೆ ಸಚಿವ ಸಂಪುಟದ ಅನುಮತಿ ಪಡೆಯಲು ಕಡತ ಸಲ್ಲಿಸಿರುವುದು ಸರಿಯಷ್ಟೆ.

ಈ ಹಿನ್ನಲೆಯಲ್ಲಿ ಪ್ರಧಾನ ಕಾರ್ಯದರ್ಶಿಗಳೊಂದಿಗೆ ತಮ್ಮ ಇಲಾಖೆಯವರು ಚರ್ಚಿಸಿದಂತೆ ಬಸವ ಹಾಗೂ ರಾಜ್ಯದ ಇತರೆ ಗೃಹ ನಿರ್ಮಾಣ ಯೋಜನೆಗಳಿಗೆ ಶೌಚಾಲಯ ನಿರ್ಮಾಣ ಕಡ್ಡಾಯದ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳುವುದಾಗಿ ತಿಳಿಸಲಾಗಿರುತ್ತದೆ. ಆದರೆ NBA ಯೋಜನೆಯ ಗುರಿಯು ಗ್ರಾಮೀಣ ಪ್ರದೇಶದಲ್ಲಿ ಬಯಲು ಮಲ ವಿಸರ್ಜನೆ ಮುಕ್ತ ಮಾಡವುದಾಗಿರುವುದರಿಂದ ಹಾಲಿ ನಿರ್ಮಾಣವಾಗುವತ್ತಿರುವ ವಸತಿ ಯೋಜನೆಯ ಮನೆಗಳ ಫಲಾನುಭವಿಗಳು NBA ಯೋಜನೆಯಡಿ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಧನ ಪಡೆಯಲು ಅರ್ಹರಾಗಿರುವುದರಿಂದ ಇವರಿರಗೂ ಸಹ IAY ಯೋಜನೆಯ ಮಾದರಿಯಲ್ಲಿ ಫಲಾನುಭವಿಗಳಿಗೆ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಧನ ಹಾಗೂ ಕೊನೆಯ ಕಂತಿನ ಅನುದಾನವನ್ನು ನೀಡಲು ಸೂಕ್ತ ಕ್ರಮಕೈಗೊಳ್ಳ ಬೇಕಾಗಿದೆ.

ಆದ್ದರಿಂದ ಮುಂದಿನ ಕ್ರಮವಹಿಸಲು ಹಾಲಿ ನಿರ್ಮಾಣದ ಹಂತದಲ್ಲಿರುವ ವಸತಿಗಳ ಜಿಲ್ಲಾವಾರು ಹಾಗೂ 2013–14ನೇ ಸಾಲಿನ ಬಸವ ಹಾಗೂ ರಾಜ್ಯದ ಇತರೆ ವಸತಿ ಯೋಜನೆಯಡಿ ನಿರ್ಮಿಸಲಾಗುವ ವಿವರವನ್ನು ನೀಡಲು ಕೋರಿದೆ.

ತಮ್ಮ ವಿಶ್ವಾಸಿ

ಮಿಷನ್ ನಿರ್ದೇಶಕರು
ರಾ.ನೀ.ನೈ.ಮಿಷನ್ ಹಾಗೂ ಸರ್ಕಾರದ
ಅಪರ ಕಾರ್ಯದರ್ಶಿಗಳು
ಗ್ರಾ. ಅ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು :**
1. ಪ್ರಧಾನ ಕಾರ್ಯದಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861 : – ಫ್ಯಾಕ್ಸ್ :-22221862 E-mail : wsrdpr@gmail.com